# ವಿಶ್ವ ವ್ಯಾಪಾರ ಸಂಘಟನೆಯತ್ತ ಗ್ರಾಹಕ ಮಾರ್ಗದರ್ಶಿ

**ಮೊದಲ ಮಾತು**

ಈ ದಿನಗಳಲ್ಲಿ ಮಾಹಿತಿಗೆ ಬರವಿಲ್ಲ. ಅಂತರ್ಜಾಲ ಹಾಗೂ ಮುದ್ರಣ ಕ್ಷೇತ್ರದ ಕ್ರಾಂತಿಯ ನಂತರ ಕಂಡ ಬೆಳವಣಿಗೆಯಿದು. ಹಾಗಾಗಿ ವಿಶ್ವ ವ್ಯಾಪಾರ ಸಂಘಟನೆ (ಡಬ್ಲ್ಯುಟಿಒ) ಅಸ್ತಿತ್ವಕ್ಕೆ ಬಂದ ಸಂದರ್ಭದಿಂದ ಅದರ ಕುರಿತ ಪಠ್ಯ ಸಾಮಗ್ರಿಗಳು ಸುಲಭವಾಗಿ ದಕ್ಕುತ್ತಿವೆ. ವರದಿಗಳು, ಪುಸ್ತಕಗಳು, ಪತ್ರಿಕಾ ಲೇಖನಗಳು, ಸಂಶೋಧನಾ ವರದಿಗಳು.... ರೂಪದಲ್ಲಿ ನೂರಾರು ದಾಖಲೆಗಳು ಈ ಬಹುಮುಖಿ ವ್ಯವಸ್ಥೆಯ ಕುರಿತಂತೆ ಪ್ರಕಾಶಿಸಲ್ಪಟ್ಟಿವೆ. ಮುಖ್ಯವಾಗಿ, ಸರ್ಕಾರೇತರ ಸಂಘಟನೆಗಳಂತೂ ಡಬ್ಲ್ಯುಟಿಒ ಹಾಗೂ ಅದರ ದುಷ್ಪರಿಣಾಮಗಳ ವಿರುದ್ಧ ದೊಡ್ಡ ಆಂದೋಲನವನ್ನೇ ಹಮ್ಮಿಕೊಂಡಿವೆ. ಇನ್ನೊಂದೆಡೆ ಸರ್ಕಾರಗಳು ಮತ್ತು ಸ್ವತಃ ಡಬ್ಲ್ಯುಟಿಒ ಬೃಹತ್ ಪ್ರಮಾಣದ ಪ್ರಚಾರ ಸಾಮಗ್ರಿ ಬಳಸಿ ಡಬ್ಲ್ಯುಟಿಒದ ಲಾಭಗಳ ಕುರಿತು ಜನಾಭಿಪ್ರಾಯ ಮೂಡಿಸಲು ಪ್ರಯತ್ನಿಸುತ್ತಿವೆ.

ಇಷ್ಟಾಗಿಯೂ ಒಬ್ಬ ಸಾಮಾನ್ಯ ನಾಗರಿಕ ಡಬ್ಲ್ಯುಟಿಒ ಬಗ್ಗೆ ಸಮತೋಲಿತ ದೃಷ್ಟಿಕೋನವನ್ನು ಅಳವಡಿಸಿಕೊಳ್ಳಲೂ ಸಾಧ್ಯವಾಗುತ್ತಿಲ್ಲ. ವಿಪರೀತ ಅಂಕಿಅಂಶ, ಕಬ್ಬಿಣದ ಕಡಲೆಯಾದ ಪಠ್ಯಗಳೂ ಇದಕ್ಕೆ ಕಾರಣ. ಡಬ್ಲ್ಯುಟಿಒವನ್ನು ಖಂಡತುಂಡವಾಗಿ ವಿರೋಧಿಸುವವರನ್ನು ವಿಚಾರಿಸಿದರೆ ಕೂಡ ಅವರು ಡಬ್ಲ್ಯುಟಿಒ ಒಪ್ಪಂದದ ಪೂರ್ಣಪಾಠವನ್ನು ಓದಿರಲಾರರು! ಅಷ್ಟೇಕೆ, ಡಬ್ಲ್ಯುಟಿಒ ಕಾರ್ಯಾಚರಣೆಯನ್ನು ವಿರೋಧಿಸುವ ಓರ್ವ ಉದ್ಯಮಿಯನ್ನು ಪ್ರಶ್ನಿಸಿ ನೋಡಿ. ಅವರೂ ಸೇರಿದಂತೆ ಬಹುಪಾಲು ಮಂದಿ ಡಬ್ಲ್ಯುಟಿಒದ ಅಂಶಗಳನ್ನು ಗಂಭೀರವಾಗಿ ಅಧ್ಯಯನ ನಡೆಸಿರುವುದು ಅನುಮಾನ.

ಡಬ್ಲ್ಯುಟಿಒ, ಅದರ ಕಾರ್ಯವೈಖರಿಗೆ ಸಂಬಂಧಿಸಿದಂತೆ ಬಳಕೆದಾರರು ಮತ್ತು ಬಳಕೆದಾರ ಸಂಘಟನೆಗಳಿಗೆ ಸಮರ್ಪಕವಾದ ವಾಸ್ತವ ಮಾಹಿತಿಯನ್ನು ಒದಗಿಸಲಾಗಿಲ್ಲ. ಅವರು ಮಾಧ್ಯಮಗಳ ವರದಿ, ಪುಸ್ತಕಗಳನ್ನು ಆಧರಿಸಿ ಪರ ವಿರೋಧದ ನಿಲುವು ತೆಗೆದುಕೊಂಡಿರುತ್ತಾರೆ. ನಿಜಕ್ಕಾದರೆ, ಈ ಪಠ್ಯಗಳು ನಿರ್ದಿಷ್ಟ ವಿಚಾರಧಾರೆಯನ್ನಷ್ಟೇ ಪ್ರತಿಪಾದಿಸುವಂತವು. ಈ ಸನ್ನಿವೇಶದಲ್ಲಿ, ಗ್ರಾಹಕ ತಜ್ಞರು, ಸಂಘಟನೆಗಳು ಮೊತ್ತಮೊದಲಾಗಿ ಡಬ್ಲ್ಯುಟಿಒ ಕುರಿತ ಮೂಲವಿಚಾರಗಳನ್ನು ಅಧ್ಯಯನ ಮಾಡಬೇಕು. ಆನಂತರವಷ್ಟೇ ತಮ್ಮ ನಿಲುವನ್ನು ಪ್ರಕಟಪಡಿಸಿದರೆ ಚೆನ್ನ.

ಈ ಅಗತ್ಯಕ್ಕಾಗಿಯೇ ವ್ಯಾಪಾರ ಮತ್ತು ಜಾಗತೀಕರಣ ಸರಣಿಯನ್ನು ಚಾಲನೆಗೊಳಿಸಲಾಗಿದೆ. ಇದರ ಮೂಲಕ ವ್ಯಾಪಾರ, ಜಾಗತಿಕರಣ, ಆರ್ಥಿಕ ಸುಧಾರಣೆ, ಗ್ಯಾಟ್ ಮುಂತಾದವುಗಳ ಕುರಿತ ವಾಸ್ತವ ವಿವರಗಳ ಲೇಖನ ಸಾಮಗ್ರಿಯನ್ನು ತಯಾರಿಸಲು ನಿರ್ಧರಿಸಲಾಗಿದೆ. ಅದರ ಮೊದಲ ಹೆಜ್ಜೆಯಾಗಿ, ಡಬ್ಲ್ಯುಟಿಒ ಕುರಿತ ಲೇಖನ ಸರಣಿ ಆರಂಭವಾಗಿದೆ.

### ಏನಿದು ಡಬ್ಲ್ಯುಟಿಒ?

ರಾಷ್ಟ್ರಗಳ ನಡುವಿನ ವ್ಯಾಪಾರ ವ್ಯವಸ್ಥೆಗೆ ನೀತಿನಿಯಮಗಳನ್ನು ರೂಪಿಸುವ ಅಂತರ್ರಾಷ್ಟ್ರೀಯ ವ್ಯವಸ್ಥೆಯೇ ಈ ವಿಶ್ವ ವ್ಯಾಪಾರ ಸಂಘಟನೆ. ಉರುಗ್ವೆ ವ್ಯಾಪಾರ ಮಾತುಕತೆಗಳ ಫಲಶೃತಿಯಾಗಿ 1995ರ ಜನವರಿ ಒಂದರಂದು ಡಬ್ಲ್ಯುಟಿಒ ಹುಟ್ಟಿಕೊಂಡಿತು. ಅಂತರ್ರಾಷ್ಟ್ರೀಯ ವ್ಯಾಪಾರಕ್ಕೆ ಅಗತ್ಯವಾದ ನಿಯಮಗಳನ್ನು ಜಾರಿಗೊಳಿಸುವ ಗರಿಷ್ಠ ಜವಾಬ್ದಾರಿಯ ವ್ಯವಸ್ಥೆಯೂ ಹೌದು. ಸದಸ್ಯ ದೇಶಗಳ ನಡುವೆ ಯಾವುದೇ ವಿವಾದ ಹುಟ್ಟಿಕೊಂಡರೆ ತೀರ್ಮಾನಿಸುವಂತ ದೂರು ಪರಿಹಾರ ವ್ಯವಸ್ಥೆಯೂ ಡಬ್ಲ್ಯುಟಿಒನಲ್ಲಿದೆ.

ತನ್ನ ವ್ಯಾಪ್ತಿಯಲ್ಲಿ ಬರುವ ಬಹುಮುಖ ಒಪ್ಪಂದಗಳ ಉದ್ದೇಶ, ಜಾರಿ, ಆಡಳಿತ, ವ್ಯವಹಾರ ಕುರಿತ ನಿರ್ದಿಷ್ಟ ಚೌಕಟ್ಟನ್ನು ಡಬ್ಲ್ಯುಟಿಒ ಒದಗಿಸುತ್ತದೆ. ಅದರ ಅಡಿಯಲ್ಲಿ ಉರುಗ್ವೆ ಸುತ್ತಿನ ಮಾತುಕತೆಗಳಿಂದ ರೂಪಿತವಾದ ಗ್ಯಾಟ್ 1947ರ ಪತ್ರದ ಮಾರ್ಪಾಟಾದ ಒಪ್ಪಂದ (ಇದನ್ನು ಗ್ಯಾಟ್ 1994 ಪತ್ರ ಎಂದು ಕರೆಯಲಾಗುತ್ತಿದೆ) ಹಾಗೂ ಬಹುಮುಖ ವ್ಯಾಪಾರದ ಉರುಗ್ವೆ ಸುತ್ತಿನ ಮಾತುಕತೆಗಳ ಒಟ್ಟು ಫಲಶೃತಿಗಳು ಡಬ್ಲ್ಯುಟಿಒ ವ್ಯಾಪ್ತಿಗೆ ಸೇರಲ್ಪಟ್ಟಿದೆ.

### ಡಬ್ಲ್ಯುಟಿಒ ಉದ್ದೇಶವೇನು?

ವಿಶ್ವ ವ್ಯಾಪಾರ ಪದ್ಧತಿಯಲ್ಲಿ ಶಿಸ್ತು, ಖಚಿತತೆ ಮತ್ತು ಪಾರದರ್ಶಕತೆಗಳನ್ನು ತರುವುದು ಡಬ್ಲ್ಯುಟಿಒದ ಮುಖ್ಯ ಉದ್ದೇಶ. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಡಬ್ಲ್ಯುಟಿಒ ಒಟ್ಟು ನಾಲ್ಕು ಮುಖ್ಯ ಕಾರ್ಯ ನಿರ್ವಹಣೆಯನ್ನು ಒಳಗೊಂಡಿದೆ.

- ಉರುಗ್ವೆ ಸುತ್ತಿನ ತೀರ್ಮಾನಗಳನ್ನು ಜಾರಿಗೆ ತರುವುದರ ಮೇಲ್ವಿಚಾರಣೆ
- ಇನ್ನಷ್ಟು ಮಾತುಕತೆಗಳಿಗೆ ವೇದಿಕೆ ಒದಗಿಸುವುದು
- ವಿವಾದಗಳನ್ನು ಇತ್ಯರ್ಥಪಡಿಸುವ ಜವಾಬ್ದಾರಿ
- ಮುಕ್ತ ವ್ಯಾಪಾರದ ಹಿನ್ನೆಲೆಯಲ್ಲಿ ಸದಸ್ಯ ರಾಷ್ಟ್ರಗಳ ಸಾಧನೆಗಳ ಪುನರಾವಲೋಕನ

ಇಷ್ಟಕ್ಕೂ ಡಬ್ಲ್ಯುಟಿಒ ಯಾವ ನೀತಿಯನ್ನು ಆಧರಿಸಿದೆ ಎಂಬ ಪ್ರಶ್ನೆ ಮೂಡದಿರದು.

### ಡಬ್ಲ್ಯುಟಿಒ ಆಧರಿಸಿದ 9 ನೀತಿಗಳು

1. ಪಾರದರ್ಶಕತೆ.
2. ವಿಶೇಷ ಆದ್ಯತಾ ದೇಶ (ಎಂಎಫ್ಎನ್) ವ್ಯವಸ್ಥೆ
3. ರಾಷ್ಟ್ರೀಯ ವ್ಯವಸ್ಥೆ
4. ಮುಕ್ತ ವ್ಯಾಪಾರ ನೀತಿ
5. ವ್ಯಾಪಾರ ತಡೆಗಳ ನಿವಾರಣೆ
6. ನಿಯಮಾಧಾರಿತ ವ್ಯಾಪಾರ ಪದ್ಧತಿ
7. ಹಿಂದುಳಿದ ರಾಷ್ಟ್ರಗಳಿಗೆ ವಿಶೇಷ, ಪ್ರತ್ಯೇಕ ವ್ಯವಸ್ಥೆ (ಎಲ್‌ಡಿಸಿ)
8. ಸ್ಪರ್ಧಾತ್ಮಕ ಚಟುವಟಿಕೆಗಳಿಗೆ ಪ್ರೋತ್ಸಾಹ
9. ಪರಿಸರ ಸಂರಕ್ಷಣೆ

### ಏನಿದು ವಿಶೇಷ ಆದ್ಯತಾ ದೇಶ?

ವಿಶ್ವ ವ್ಯಾಪಾರ ಒಪ್ಪಂದದ ಅನ್ವಯ ದೇಶಗಳು ತಮ್ಮ ಸಹವರ್ತಿ ದೇಶಗಳಿಗೆ ಸಂಬಂಧಿಸಿದಂತೆ ನೀತಿಯಲ್ಲಿ ಪಕ್ಷಪಾತದ ಧೋರಣೆ ತೋರುವಂತಿಲ್ಲ ಎಂಬ ನಿಯಮವಿದೆ. ಉದಾಹರಣೆಗೆ ಡಬ್ಲ್ಯುಟಿಒ ಸದಸ್ಯ ರಾಷ್ಟ್ರಗಳ ಪೈಕಿ ಒಂದರ ತಯಾರಿಕೆಗಳಿಗೆ ಅತ್ಯಂತ ಕಡಿಮೆ

ತೆರಿಗೆ ವಿಧಿಸಿ, ಉಳಿದವುಗಳಿಗೆ ಹೆಚ್ಚು ದರ ಹೇರುವಂತಿಲ್ಲ.

ಡಬ್ಲ್ಯುಟಿಒನಲ್ಲಿ ಇದಕ್ಕೆ ಕೆಲವು ರಿಯಾಯ್ತಿಗಳಿವೆ. ಒಂದು ವಲಯದ ರಾಷ್ಟ್ರಗಳ ನಡುವೆ ಮುಕ್ತ ವ್ಯಾಪಾರದ ಒಪ್ಪಂದ ಮಾಡಿಕೊಳ್ಳಬಹುದು. ಇದು ವಲಯದಿಂದ ಹೊರಗಿರುವ ದೇಶಗಳಿಗೆ ಅನ್ವಯಿಸುವುದಿಲ್ಲ. ಅಷ್ಟೇಕೆ, ನಿರ್ದಿಷ್ಟ ದೇಶದ ವ್ಯಾಪಾರವೊಂದು ಅನೀತಿಯದ್ದು ಎನಿಸಿದರೆ ಆ ತಯಾರಿಕೆಯ ಆಮದಿನ ಮೇಲೆ ಹತ್ತಾರು ನಿಬಂಧನೆಗಳನ್ನು ಒಡ್ಡಬಹುದು.

ಯುರೋಪಿಯನ್ ಒಕ್ಕೂಟದ ರಾಷ್ಟ್ರಗಳ ಮಧ್ಯೆ ಅಥವಾ ನಮ್ಮಲ್ಲಿರುವಂತೆ, ಸಾರ್ಕ್ ದೇಶಗಳ ನಡುವೆ ಈ ಎಂಎಫ್ಎನ್ ವ್ಯವಸ್ಥೆಯನ್ನು ಜಾರಿಗೊಳಿಸಿಕೊಂಡರೆ ಅದನ್ನು ಡಬ್ಲ್ಯುಟಿಒಗೆ ವ್ಯತಿರಿಕ್ತ ಎನ್ನುವಂತಿಲ್ಲ. ಕೆಲವೊಮ್ಮೆ ದೇಶಗಳು, ಕಂಪನಿಗಳು ದೇಶೀಯ ಮಾರುಕಟ್ಟೆಯನ್ನು ಪ್ರಭಾವಿಸಲು ತಮ್ಮ ತಯಾರಿಕೆಯೊಂದನ್ನು ತೂರಿಸುವುದಕ್ಕೆ ಹಲವು ವಿಧದಲ್ಲಿ ಪ್ರಯತ್ನಿಸಬಹುದು. ಆಗ ಡಬ್ಲ್ಯುಟಿಒ ಸದಸ್ಯ ರಾಷ್ಟ್ರ ಇದರ ವಿರುದ್ಧ (ಆ್ಯಂಟಿ ಡಂಪಿಂಗ್) ವಿಶೇಷ ತೆರಿಗೆ, ನಿರ್ಬಂಧ ಹೇರಬಹುದು. ಗ್ಯಾಟ್ 1994ರಲ್ಲಿ ಈ ಎರಡು ವಿಶೇಷ ಮಾರ್ಗಗಳಿಗೆ ಅವಕಾಶ ನೀಡಲಾಗಿದೆ.

ಪಕ್ಷಪಾತವಿಲ್ಲದ ದೇಶೀಯ ವ್ಯವಸ್ಥೆ

ಡಬ್ಲ್ಯುಟಿಒದ ಅತಿ ಮುಖ್ಯ ನಿಯಮಗಳಲ್ಲಿ ಇದು ಪ್ರಮುಖ. ಯಾವುದೇ ದೇಶ ತನ್ನ ಆಂತರಿಕ ತಯಾರಿಕೆಯನ್ನು ರಕ್ಷಿಸಲು ರಫ್ತು ಪದಾರ್ಥದ ಮೇಲೆ ಹೆಚ್ಚುವರಿಯಾದ ತೆರಿಗೆ, ಇತರೆ ಸರ್‌ಚಾರ್ಜ್, ಕಾನೂನು ನಿಬಂಧನೆ ಮುಂತಾದ ಅಡೆತಡೆಗಳನ್ನು ಹೇರುವಂತಿಲ್ಲ. ದೇಶೀಯ ತಯಾರಿಕೆಗೆ ಲಾಗೂವಾಗುವ ತೆರಿಗೆ, ನಿಬಂಧನೆಗಳನ್ನಷ್ಟೇ ಆಮದಾಗುವ ಸರಕಿಗೂ ವಿಧಿಸಬೇಕು ಎನ್ನುತ್ತದೆ ಈ ನಿಯಮ.

## ಡಬ್ಲ್ಯುಟಿಒ ಕಾರ್ಯವಿಧಾನ

ಸದಸ್ಯ ರಾಷ್ಟ್ರಗಳು ಡಬ್ಲ್ಯುಟಿಒವನ್ನು ನಿರ್ವಹಿಸುತ್ತಾರೆ. ಆಯಾ ದೇಶಗಳನ್ನು ಅಲ್ಲಿನ ಮಂತ್ರಿಗಳು ಅಥವಾ ಸರ್ಕಾರ ನೇಮಿಸಿದ ತಜ್ಞರು ಪ್ರತಿನಿಧಿಸುತ್ತಾರೆ. ಯಾವುದೇ ಪ್ರಮುಖ ತೀರ್ಮಾನ ಎಲ್ಲ ದೇಶಗಳ ಒಪ್ಪಿಗೆ ಅಥವಾ ಒಮ್ಮತ ಮೂಡಿಸಿ ನಿರ್ಧರಿಸಲಾಗುತ್ತದೆ.

ಡಬ್ಲ್ಯುಟಿಒದ ಸಚಿವ ಸಮಿತಿ ಪರಮಾಧಿಕಾರದ್ದು. ಸರಿಯಾದ ತೀರ್ಮಾನ ವ್ಯವಸ್ಥೆ, ಸಾರ್ವತ್ರಿಕ ಮಂತ್ರಾಲೋಚನ ಸಮಿತಿ, ವ್ಯಾಪಾರ ನೀತಿ ಪರಿಶೀಲನಾ ಸಮಿತಿಗಳು ಸಚಿವ ಸಮಿತಿಯ ಮೇಲ್ವಿಚಾರಣೆಯಲ್ಲಿರುತ್ತದೆ. ಇನ್ನುಳಿದ ಸಮಿತಿಗಳೆಂದರೆ,

- ವ್ಯಾಪಾರ ಮತ್ತು ಅಭಿವೃದ್ಧಿ ಸಮಿತಿ
- ಪಾವತಿ ವ್ಯವಸ್ಥಾಪಕ ಸಮಿತಿ
- ಬಜೆಟ್, ಹಣಕಾಸು, ಆಡಳಿತ ಸಮಿತಿ
- ಬಹುಮತದ ಆಯ್ಕೆಯ ಸಮಿತಿ

ಡಬ್ಲ್ಯುಟಿಒ ಮೂರು ಪ್ರಮುಖ ಮಂತ್ರಾಲೋಚನ ಸಮಿತಿ ಹೊಂದಿದೆ. ಸರಕು ವ್ಯಾಪಾರ ಸಮಿತಿ, ಸೇವಾ ವಿಕ್ರಯ ಮಂತ್ರಾಲೋಚನ ಸಭೆ, ಬೌದ್ಧಿಕ ಸ್ವತ್ತಿನ ವಿಚಾರಗಳ ವ್ಯಾಪಾರಕ್ಕೆ ಸಂಬಂಧಿಸಿದ ಸಮಿತಿಗಳೇ ಆ ಮೂರು. ಇದರ ಕೆಳಗೆ ಡಬ್ಲ್ಯುಟಿಒ ವೈಯುಕ್ತಿಕ ಒಪ್ಪಂದಗಳ ಕುರಿತ ಎರಡು ಸಮಿತಿಗಳಿವೆ.

## ಡಬ್ಲ್ಯುಟಿಒ ಮುಂದಿನ ಮುಖ್ಯ ವಿಷಯಗಳು

ಕೃಷಿ, ಎಸ್‌ಪಿಎಸ್ ಕ್ರಮಗಳು, ತಾಂತ್ರಿಕ ಗುಣಮಟ್ಟ, ಬಟ್ಟೆ ಉದ್ಯಮ, ಸರಕು ಸುರಿ

ವಿರೋಧ, ಸಮತೋಲನ ಕ್ರಮಗಳು, ಸಂರಕ್ಷಣೆ, ತೆರಿಗೆ ಮೌಲ್ಯೀಕರಣ, ಮೂಲ ನಿರ್ಧಾರ ನಿಯಮಗಳು, ಸೇವೆಗಳ ವ್ಯಾಪಾರಕ್ಕೆ ಸಂಬಂಧಿಸಿದ ಸಾರ್ವತ್ರಿಕ ಒಪ್ಪಂದಗಳು (ಜಿಎಟಿಎಸ್) ಟ್ರಿಪ್ಸ್, ಟ್ರಿಮ್ಸ್ ಮತ್ತು ವಿವಾದ ಪರಿಹಾರ ವ್ಯವಸ್ಥೆ.

**ಹೊಸ ವಿಚಾರಗಳು**

ಸುಗಮ ವ್ಯಾಪಾರ, ಎಲೆಕ್ಟ್ರಾನಿಕ್ ವ್ಯವಹಾರ, ತಾಂತ್ರಿಕತೆ ವರ್ಗಾವಣೆ, ವ್ಯಾಪಾರ ಮತ್ತು ಪರಿಸರ, ವ್ಯಾಪಾರ ಮತ್ತು ದುಡಿಮೆ, ವ್ಯಾಪಾರ ಮತ್ತು ಸ್ಪರ್ಧಾತ್ಮಕ ನೀತಿ ಹಾಗೂ ವ್ಯಾಪಾರ ಮತ್ತು ಬಂಡವಾಳ

**ಗ್ಯಾಟ್‌ನ ಮೂಲ ಸದಸ್ಯರು**

ಆಸ್ಟ್ರೇಲಿಯಾ, ಬೆಲ್ಜಿಯಂ, ಬ್ರೆಜಿಲ್, ಬರ್ಮಾ (ಈಗ ಮ್ಯಾನ್ಮಾರ್), ಕೆನಡಾ, ಸಿಲೋನ್ (ಈಗ ಶ್ರೀಲಂಕಾ), ಚಿಲಿ, ಚೀನಾ ಕ್ಯುಬಾ, ಚೆಕೋಸ್ಲಾವಾಕಿಯಾ, ಫ್ರಾನ್ಸ್, ಭಾರತ, ಲೆಬನಾನ್, ಲುಕ್ಸೆನ್‌ಬರ್ಗ್, ನೆದರ್ಲೆಂಡ್ಸ್, ನ್ಯೂಜಿಲ್ಯಾಂಡ್, ನಾರ್ವೆ, ಪಾಕಿಸ್ತಾನ, ದಕ್ಷಿಣ ರುಡೇಸಿಯಾ (ಈಗ ಜಿಂಬಾಬ್ವೆ), ಸಿರಿಯಾ, ದಕ್ಷಿಣ ಆಫ್ರಿಕಾ, ಯುನೈಟೆಡ್ ಕಿಂಗ್‌ಡಮ್ ಮತ್ತು ಅಮೆರಿಕ.

**ಡಬ್ಲ್ಯುಟಿಒ ಘಟನಾವಳಿ**

1947 – ಗ್ಯಾಟ್ ಅಸ್ತಿತ್ವಕ್ಕೆ
1949 – ಅನೆಸ್ಸಿಯಲ್ಲಿ ಎರಡನೇ ಮಾತುಕತೆ
1956 – ಜೆನೆವಾದಲ್ಲಿ ಮೂರನೇ ಮಾತುಕತೆ
1960 – ದಿಲ್ಲಾನ್ ಮಾತುಕತೆ
1961 – ಬಹುಮುಖಿ ಒಪ್ಪಂದ (ಎಮ್‌ಎಫ್‌ಎ)ದ ಆರಂಭ
1960 – ದಿಲ್ಲಾನ್ ಮಾತುಕತೆ
1961 – ಬಹುಮುಖಿ ಒಪ್ಪಂದ (ಎಮ್‌ಎಫ್‌ಎ)ದ ಆರಂಭ
1964 – ಕೆನೆಡಿ ಮಾತುಕತೆ
1973 – ಟೋಕಿಯೋ ಮಾತುಕತೆ
1982 – ಉರುಗ್ವೆ ಮಾತುಕತೆ ಆರಂಭ
1993 – ಉರುಗ್ವೆ ಮಾತುಕತೆಯ ಯಶಸ್ವಿ ಮುಕ್ತಾಯ
1995 – ವಿಶ್ವ ವ್ಯಾಪಾರ ಸಂಘಟನೆ (ಡಬ್ಲ್ಯುಟಿಒ) ಚಾಲ್ತಿಗೆ
1998 – ಜೆನಿವಾ ಸಚಿವ ಮಾತುಕತೆ
1999 – ಸಿಯಾಟಲ್ ಸಚಿವ ಮಾತುಕತೆ
2001 – ದೋಹಾ ಸಚಿವ ಮಾತುಕತೆ
2003 – ಕ್ಯಾನುಕುನ್ ಸಭೆ

**ಬಡ ದೇಶಗಳಿಗೆ ರಿಯಾಯತಿ**

- ಅಭಿವೃದ್ಧಿಶೀಲ ಹಾಗೂ ಹಿಂದುಳಿದ ದೇಶಗಳಿಗೆ ತಮ್ಮ ಜವಾಬ್ದಾರಿಗಳನ್ನು ಪೂರೈಸಲು ಬಹುಪಾಲು ಎಲ್ಲ ಒಪ್ಪಂದಗಳಲ್ಲಿ ಹೆಚ್ಚಿನ ಸಮಯ ಒದಗಿಸಲಾಗಿದೆ.
- ಈ ಮಾದರಿಯ ದೇಶಗಳಿಗೆ ಅಭಿವೃದ್ಧಿ ಹೊಂದಿದ ರಾಷ್ಟ್ರಗಳಲ್ಲಿ ದೊಡ್ಡ ಪ್ರಮಾಣದ ಮಾರುಕಟ್ಟೆ ಲಭ್ಯವಾಗುವಂತೆ ಅವಕಾಶಗಳನ್ನು ಕಲ್ಪಿಸಲಾಗಿದೆ.
- ಈ ದೇಶಗಳ ಆಸಕ್ತಿಗಳನ್ನು ರಕ್ಷಿಸಲು ಬೇಕಾದ ಆಂತರಿಕ ಕ್ರಮಗಳನ್ನು ತೆಗೆದುಕೊಳ್ಳಲು ಡಬ್ಲ್ಯುಟಿಒ ಸದಸ್ಯ ರಾಷ್ಟ್ರಗಳಿಗೆ ಪ್ರಾವಿಧಾನ ಒದಗಿಸಲಾಗಿದೆ.
- ಅಭಿವೃದ್ಧಿಶೀಲ ಮತ್ತು ಹಿಂದುಳಿದ ದೇಶಗಳಿಗೆ ತಾಂತ್ರಿಕ ನೆರವು ಒದಗಿಸಲು ಅವಕಾಶ. ಈ ಮೂಲಕ ಗುಣಮಟ್ಟದ ಮಾನದಂಡವನ್ನು ಈ ದೇಶದ ತಯಾರಿಕೆಗಳು ಪಡೆಯಲು ವ್ಯವಸ್ಥೆ.

**ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ:**

ಗ್ರಾಹಕ ಹಕ್ಕು ಶಿಕ್ಷಣ ಮತ್ತು ಜಾಗೃತಿ ದತ್ತಿ (ಕ್ರಿಯೇಟ್), 239, 5ನೇ 'ಸಿ' ಮುಖ್ಯರಸ್ತೆ, ರೆಮ್ಕೋ ಬಡಾವ ವಿಜಯನಗರ, ಬೆಂಗಳೂರು – 560 040, ಭಾರತ. ದೂರವಾಣಿ:91-80-2335780, **ಇ ಮೇಲ್** creatorg@sify.com **Website: creatindia.org**

ಭಾವಾನುವಾದ **-ಮಾ.ವೆಂ.ಸ.ಪ್ರಸಾದ್**

ಮಾವಿನಸರ

ಪೋಸ್ಟ್-ಎಡಜಿಗಳೇಮನೆ

ಸಾಗರ ತಾ. ಶಿವಮೊಗ್ಗ ಜಿ.

577401

ಫೋನ್-08183 236068, 296543, 9886407592

ಇ ಮೇಲ್- mavemsa@gmail.com